ದಿನಾಂಕಃ 12.01.2026 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು: 1 ರಿಂದ 3 ನೇ ಪ್ರತಿವಾದಿ ಪರ ಶ್ರೀ ಜಿ.ಬಿ.ವಿ. ವಕೀಲರಿಂದ:**

ನಾನು 10 ನೇ ತರಗತಿ ವಿದ್ಯಾಭ್ಯಾಸ ಮಾಡಿರುತ್ತೇನೆ. ದಾವೆಯನ್ನು ಸಲ್ಲಿಸಲು ನನ್ನ ವಕೀಲರಿಗೆ ನಾನೇ ಮಾಹಿತಿಯನ್ನು ನೀಡಿರುತ್ತೇನೆ. 2016 ನೇ ಸಾಲಿನಲ್ಲಿ ನಾನು ದಾವಾ ಸ್ವತ್ತನ್ನು ಖರೀದಿ ಮಾಡಿರುತ್ತೇನೆ. ದಾವಾ ಸ್ವತ್ತನ್ನು ಲಿಲ್ಲಿ ಸಾಲ್ಡಾನ ಎಂಬುವವರಿಂದ ಖರೀದಿಸಿರುತ್ತೇನೆ. ನಾನು ಸದರಿಯವರಿಂದ 2 ಎಕರೆ ಜಮೀನನ್ನು ಖರೀದಿ ಮಾಡಿರುತ್ತೇನೆ. ಸಾಮಾನ್ಯವಾಗಿ ಸ್ವತ್ತನ್ನು ಖರೀದಿಸುವ ಪೂರ್ವದಲ್ಲಿ ನಕ್ಷೆಯನ್ನು ಪಡೆಯಬೇಕು ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಾನು ಪಹಣಿಯನ್ನು ನೋಡಿ ಖರೀದಿಸಿರುತ್ತೇನೆ ಎಂದು ನುಡಿಯುತ್ತಾರೆ. ಸ್ವತ್ತನ್ನು ಖರೀದಿಸುವ ಪೂರ್ವದಲ್ಲಿ ಸ್ವತ್ತಿನ ಅಸ್ತಿತ್ವ ಮತ್ತು ಅದರ ಮಾಲೀಕತ್ವದ ಬಗ್ಗೆ ತಿಳಿದುಕೊಳ್ಳಬೇಕು ಎಂದು ನನಗೆ ಅನಿಸಿರುವುದಿಲ್ಲ. ಸ್ವತ್ತನ್ನು ಖರೀದಿಸುವ ಪೂರ್ವದಲ್ಲಿ ಸ್ವತ್ತಿನ ದಾಖಲಾತಿಯನ್ನು ತೋರಿಸಿ ಯಾರಿಂದಲೂ ಅಭಿಪ್ರಾಯವನ್ನು ಪಡೆದುಕೊಂಡಿರುವುದಿಲ್ಲ. ನಾನು ಬೆಂಗಳೂರಿನಲ್ಲಿ ಇದ್ದ ಸಮಯದಲ್ಲಿ ಪಹಣಿಯನ್ನು ಪರಿಶೀಲಿಸಿ ಖರೀದಿಸಬೇಕು ಎಂದು ತೀರ್ಮಾನಿಸಿದ ಮೇರೆಗೆ ಖರೀದಿಸಿರುತ್ತೇನೆ ಎಂದರೆ ಸರಿ. ಸ್ವತ್ತನ್ನು ಖರೀದಿಸಿ ಅದರ ಗಡಿಯನ್ನು ಗುರುತಿಸುವ ಸಮಯದಲ್ಲಿ ಸ್ವತ್ತು ಒತ್ತುವರಿಯಾಗಿರುವ ಬಗ್ಗೆ ಮಾಹಿತಿಯು ತಿಳಿದು ಬಂದಿರುತ್ತದೆ. ಸ್ವತ್ತಿನ ಒತ್ತುವರಿಯ ಬಗ್ಗೆ ತಿಳಿದುಕೊಳ್ಳಲು ಪ್ರಯತ್ನಿಸಿರುತ್ತೀರಾ ಎಂದರೆ ಸಾಕ್ಷಿಯು ನಾನು ಸ್ವತ್ತನ್ನು ಖರೀದಿಸುವ ಮೊದಲೇ ಒತ್ತುವರಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ.

ಸಾಮಾನ್ಯವಾಗಿ ಒಬ್ಬ ವ್ಯಕ್ತಿಯ ಹೆಸರಿನಲ್ಲಿ ಜಮೀನು ಇದ್ದ ಪಕ್ಷದಲ್ಲಿ ಮಾತ್ರ ಆ ಜಮೀನನ್ನು ಮಾರಾಟ ಮಾಡಬಹುದು ಎಂದರೆ ಸರಿ. ನಾನು ಈ ದಾವೆಯಲ್ಲಿ ಹಾಜರುಪಡಿಸಿರುವ ದಾಖಲಾತಿಯನ್ನು ಓದಿ ನೋಡಿರುತ್ತೇನೆ. ನಿಪಿ-1 ರಲ್ಲಿ ಮೂರನೇ ಪುಟದ ಮೊದಲನೇ ಪ್ಯಾರಾದ ಮೂರನೇ ಸಾಲಿನಲ್ಲಿ "ದಾವಾ ಅನುಸೂಚಿಯನ್ನು ನಿಮ್ಮ ಸ್ವಾಧೀನಕ್ಕೆ ಕುಲ್ಲಾ ಸ್ಥಿತಿಯಲ್ಲಿ ವಹಿಸಿಕೊಟ್ಟಿರುತ್ತೇನೆ" ಎಂದು ನಮೂದಿಸಲಾಗಿರುತ್ತದೆ ಎಂದರೆ ಸರಿ. ನಿಪಿ-1 ರ ಅನುಸೂಯಲ್ಲಿ ಪ್ರತಿವಾದಿಯವರನ್ನು ಬಾಜೂದಾರರನ್ನಾಗಿ ತೋರಿಸಿರುತ್ತೇವೆ. ಈ ದಾವೆಯಲ್ಲಿ 3 ಅನುಸೂಚಿಗೆ ಸಂಬಂಧಿಸಿದಂತೆ ಆದೇಶವನ್ನು ಕೋರಿರುತ್ತೇನೆ. ದಾವಾ ಅನುಸೂಚಿಯ ಪ್ರಕಾರ ಮೊದಲನೇ ಅನುಸೂಚಿಯಲ್ಲಿ 13 ಗುಂಟೆ, ಎರಡನೇ ಅನುಸೂಚಿಯಲ್ಲಿ 6½ ಗುಂಟೆ ಮತ್ತು ಮೂರನೇ ಅನುಸೂಚಿಯಲ್ಲಿ 6½ ಗುಂಟೆ ಸ್ವತ್ತಿಗೆ ಸಂಬಂಧಿಸಿದಂತೆ ಆದೇಶವನ್ನು ಕೋರಿರುತ್ತೇನೆ. ಮೊದಲನೆಯ 13 ಗುಂಟೆಯ ಚೆಕ್ಕುಬಂದಿಯು ಪೂರ್ವಕ್ಕೆ ಜಾನಪ್ಪ ಗೌಡರ ಜಮೀನು, ಪಶ್ಚಿಮಕ್ಕೆ ಸರ್ಕಾರಿ ಜಮೀನು, ಸಾಕ್ಷಿಯು ದಾಖಲೆಯನ್ನು ಒದಗಿಸಿರುತ್ತೇನೆ, ಪ್ರಸ್ತುತವಾಗಿ ನೆನಪಾಗುತ್ತಿಲ್ಲ ಎಂದು ನುಡಿಯುತ್ತಾರೆ. ಎರಡನೇ ಅನುಸೂಚಿಯ 6½ ಗುಂಟೆ ಜಮೀನಿಗೆ, ಪೂರ್ವಕ್ಕೆ 3 ನೇ ಪ್ರತಿವಾದಿಯವರ ಜಮೀನು, ಪಶ್ಚಿಮಕ್ಕೆ 2 ನೇ ಪ್ರತಿವಾದಿಯವರ ಜಮೀನು, ಉತ್ತರಕ್ಕೆ ಜೀವನ್ ಎಂಬುವವರ ಜಮೀನು, ಸಾಕ್ಷಿಯು ದಾಖಲೆಯನ್ನು ಒದಗಿಸಿರುತ್ತೇನೆ, ಪ್ರಸ್ತುತವಾಗಿ ನೆನಪಾಗುತ್ತಿಲ್ಲ ಎಂದು ನುಡಿಯುತ್ತಾರೆ.

ಮೂರನೇ ಅನುಸೂಚಿಗೆ ಯಾವ ಚೆಕ್ಕುಬಂದಿಯನ್ನು ನಮೂದಿಸಿರುತ್ತೀರಾ ಎಂದರೆ ಸಾಕ್ಷಿಯು ದಾಖಲೆಯನ್ನು ಒದಗಿಸಿರುತ್ತೇನೆ, ಪ್ರಸ್ತುತವಾಗಿ ನೆನಪಾಗುತ್ತಿಲ್ಲ ಎಂದು ನುಡಿಯುತ್ತಾರೆ. ದಾವಾ ಅನುಸೂಚಿಯಲ್ಲಿ ನಮೂದಿಸಿರುವ 13 ಗುಂಟೆ ಜಮೀನಿನ ಪೂರ್ವ ದಿಕ್ಕಿಗೆ ನಮ್ಮ ಜಮೀನು ಬರುತ್ತದೆ ಹಾಗೂ 6½ ಮತ್ತು 6½ ಗುಂಟೆ ಜಮೀನಿನ ಉತ್ತರ ದಿಕ್ಕಿಗೆ ನಮ್ಮ ಜಮೀನು ಬರುತ್ತದೆ. ನಾನು ಯಾವ ಇಸವಿಯಂದು ಮೋಜಣಿಗೆ ಅರ್ಜಿಯನ್ನು ಸಲ್ಲಿಸಿರುತ್ತೇನೆ ಎಂದು ನೆನಪಾಗುತ್ತಿಲ್ಲ. ಮೋಜಣಿ ಮಾಡಿಸುವ ಪೂರ್ವದಲ್ಲಿ ಪ್ರತಿವಾದಿಯವರಿಗೆ ಮತ್ತು ಆಜು ಬಾಜುದಾರರಿಗೆ ನೋಟೀಸನ್ನು ನೀಡಿರುತ್ತೇನೆ. ಸದರಿ ಬಾಬ್ತು ದಾಖಲಾತಿಯನ್ನು ಹಾಜರುಪಡಿಸಿರುತ್ತೇನೆ. ನಿಪಿ-1 ರಲ್ಲಿ ನಮೂದಿಸಿರುವ ಚೆಕ್ಕುಬಂದಿಯು ಪೂರ್ವಕ್ಕೆ ಜಾನಪ್ಪ ಗೌಡ ರವರ ಜಮೀನು, ಉತ್ತರಕ್ಕೆ ಜೀವನ್, ಇಬ್ರಾಹಿಮ್ ರವರ ಜಮೀನು, ಪಶ್ಚಿಮಕ್ಕೆ ಸರ್ಕಾರಿ ಜಮೀನು ಮತ್ತು ದಕ್ಷಿಣಕ್ಕೆ 2 ಮತ್ತು 3 ನೇ ಪ್ರತಿವಾದಿಯವರ ಜಮೀನು ಬರುತ್ತದೆ. ಸದರಿ ವಿಷಯವನ್ನು ದಾವಾ ಪತ್ರದಲ್ಲಿ ನಮೂದಿಸಿರುವುದನ್ನು ಓದಿರುತ್ತೇನೆ ಆದರೆ ಪ್ರಸ್ತುತವಾಗಿ ನೆನಪಾಗುತ್ತಿಲ್ಲ. ನಿಪಿ-1 ರಲ್ಲಿ ನಮೂದಿಸಿರುವ ಚೆಕ್ಕುಬಂದಿಯ ಜಮೀನನ್ನು ಹೊರತುಪಡಿಸಿ ನಾನು ಇತರೆ ಜಮೀನನ್ನು ಖರೀದಿಸಿರುವುದಿಲ್ಲ ಎಂದರೆ ಸರಿ.

ನಾನು ಮೇಲೆ ತಿಳಿಸಿರುವ ಚೆಕ್ಕುಬಂದಿಯ ಮದ್ಯದಲ್ಲಿರುವ ಜಮೀನಿಗೆ ಸಂಬಂಧಿಸಿದಂತೆ ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿ. ಸದರಿ ವಿಷಯವನ್ನು ನಾನು ನನ್ನ ವಕೀಲರಿಗೆ ತಿಳಿಸಿರುತ್ತೇನೆ. ನಾನು ಯಾವ ವರ್ಷ ಸ್ವತ್ತಿನ ಮೋಜಣಿಯನ್ನು ಮಾಡಿಸಿರುತ್ತೇನೆ ಎಂದು ನೆನಪಾಗುತ್ತಿಲ್ಲ. ನಾನು ಖರೀದಿಸಿರುವ ಜಮೀನಿನಲ್ಲಿ ಅಡಿಕೆ ಮತ್ತು ಕಾಫೀ ಬೆಳೆಯನ್ನು ಬೆಳೆದಿರುತ್ತೇನೆ. ನಾನು ದಾಖಲಾತಿಯನ್ನು ನೋಡದೆಯೂ ನಮ್ಮ ಜಮೀನು ಒತ್ತುವರಿಯಾಗಿರುವ ಬಗ್ಗೆ ಮಾಹಿತಿಯನ್ನು ನೀಡುತ್ತೇನೆ. ನನ್ನ ಜಮೀನು ಒತ್ತುವರಿಯಾಗಿರುವ ವಿಸ್ತೀರ್ಣದ ಬಗ್ಗೆ ದಾವಾ ಅನುಸೂಚಿಯಲ್ಲಿ ನಮಾದಿಸಿರುತ್ತೇನೆ. ದಾವಾ ಅನುಸೂಚಿಯನ್ನು ಬಿಟ್ಟು ಇತರೆ ಜಮೀನು ನನ್ನ ಹೆಸರಿನಲ್ಲಿರುತ್ತದೆ. ಸಾಮಾನ್ಯವಾಗಿ ಜಮೀನಿನ ವ್ಯವಹಾರದ ಬಗ್ಗೆ ನನಗೆ ಮಾಹಿತಿ ಇರುತ್ತದೆ ಎಂದರೆ ಸರಿ. ನಾವು ಖರೀದಿಸುವ ಜಮೀನು ಮೂರನೇ ವ್ಯಕ್ತಿಗಳ ಸ್ವಾಧೀನದಲ್ಲಿದ್ದರೆ ಸದರಿ ಜಮೀನಿನ ಬಗ್ಗೆ ಮಾಡಿಕೊಂಡ ಕ್ರಯ ಪತ್ರಕ್ಕೆ ಯಾವುದು ಕಾನೂನಾತ್ಮಕ ಮನ್ನಣೆ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಖರೀದಿಸುವ ಪೂರ್ವದಲ್ಲಿ ದಾವಾ ಸ್ವತ್ತು ಪ್ರತಿವಾದಿಯವರ ಸ್ವಾಧೀನದಲ್ಲಿದ್ದು ಸದರಿ ವಿಷಯ ನಮಗೆ ಇತ್ತೀಚಿಗೆ ತಿಳಿದು ಬಂದಿರುತ್ತದೆ ಎಂದು ನನ್ನ ವಾದ ಪತ್ರದಲ್ಲಿ ಬರೆಸಿರುವ ಬಗ್ಗೆ ನನಗೆ ನೆನಪಾಗುತ್ತಿಲ್ಲ.

ಸಾಮಾನ್ಯವಾಗಿ ಒಂದು ಜಮೀನನ್ನು ಖರೀದಿಸಿದ ತಕ್ಷಣ ಅದರ ಹದ್ದುಬಸ್ತಿಗೆ ಅರ್ಜಿಯನ್ನು ಸಲ್ಲಿಸುತ್ತೇವೆ ಎಂದರೆ ಸರಿ. ನಾನು ದಾವಾ ಸ್ವತ್ತನ್ನು ಖರೀದಿಸಿದ ಸಾಲಿನಲ್ಲೇ ಹದ್ದುಬಸ್ತಿಗೂ ಅರ್ಜಿಯನ್ನು ಸಲ್ಲಿಸಿರುತ್ತೇನೆ. ನಾನು ದಾವಾ ಸ್ವತ್ತನ್ನು ಖರೀದಿಸಿದ ಸಾಲಿನಲ್ಲಿ ಹದ್ದುಬಸ್ತಿಗೆ ಅರ್ಜಿಯನ್ನು ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ.

**<u>ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು ನೀಡಲಾಯಿತು.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

1 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.